ಗೃಹ ನಿರ್ಮಾಣಕ್ಕೆ ಬಳಿಸುವ ಮನೆ ಸಲಕರಣೆಗಳ ಬೆಲೆ

74 - ಶ್ರೀ ಲಿಂಗಪ್ಪ. ಸಿ.ಎಂ (ರಾಮನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೃಹ ನಿರ್ಮಾಣಕ್ಕಾಗಿ ಬಳಿಸಲಾಗುತ್ತಿರುವ ಸಲಕರಣೆಗಳ ಬೆಲೆಗಳು ವರ್ಷಕ್ಕೆ ದುಬಾರಿಯಾಗುತ್ತಿರುವುದು ವಾಸ್ತವಿಕ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆ ಹಿನ್ನೆಲೆಯಲ್ಲಿ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಜ್ ಯೋಜನೆಗಳಡಿಯಲ್ಲಿ ಗೃಹ ನಿರ್ಮಾಣಕ್ಕಾಗಿ ಫಲಾನುಭವಿಗಳಿಗೆ ನೀಡಲಾಗುತ್ತಿರುವ ರೂ. 20,000/- ಗಳು ಸಾಕಾಗುವುದಿಲ್ಲವೆಂಬ ವಾಸ್ತವಿಕ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಆದ್ದರಿಂದ ಈ ಮೊತ್ತವನ್ನು ಕನಿಷ್ಟ ರೂ. 30,000/- ರೂಗಳಿಗಾದರೂ ಹೆಚ್ಚಿಸಲು ಸರ್ಕಾರ ಪರಿಶೀಲಿಸುವುದೇ?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಬಂದಿದೆ.

ಆ) ಇಲ್ಲ.

ಇ) ಸಧ್ಯಕ್ಕೆ ಈ ಪ್ರಸ್ತವನೆ ಇರುವುದಿಲ್ಲ.

ಶ್ರೀ ಸಿ.ಎಂ. ಲಿಂಗಪ್ಪ : ಸನ್ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೇ ಪ್ರಶ್ನೆ ಬಹಳ ಮೂಲಭೂತವಾದಂತಹ ಪ್ರಶ್ನೆ. ಅದಕ್ಕೆ ಸನ್ಮಾನ್ಯ ವಸತಿ ಸಚಿವರು 'ಗಮನಕ್ಕೆ ಬಂದಿದೆ' ಎನ್ನುವ ಮಾತನ್ನು ಒಪ್ಪಿಕೊಳ್ಳುತ್ತಾರೆ. ಅಂದ ಮೇಲೆ ಈ ಆಶ್ರಯ, ಅಂಬೇಡ್ಕರ್ ಯೋಜನೆಗಳಲ್ಲಿರತಕ್ಕ ಮನೆಗಳ ವೆಚ್ಚವೂ, ಕೂಡ ಜಾಸ್ತಿ ಆಗಿದೆ. ಬಹಳಷ್ಟು ಪ್ರಸಂಗಗಳಲ್ಲಿ ಆ ಮನೆಗಳು ಪೂರ್ಣವಾಗದೇ ಇರುವುದಕ್ಕೆ ಫಲಾನುಭವಿಗಳು ಅವುಗಳ ನಿರ್ಮಾಣ ವೆಚ್ಚವನ್ನು ಪೂರ್ಣವಾಗಿ ಭರಿಸದೇ ಇರುವುದೇ ಮುಖ್ಯ ಕಾರಣ. ಅದಕ್ಕಾಗಿ ಈಗೇನು 20 ಸಾವಿರ ರೂಪಾಯಿಗಳು ಎಂದು ಏನು ನಿಗದಿ ಪಡಿಸಿದ್ದಾರೆ. ಇದನ್ನು ದಯಮಾಡಿ 25 ಅಥವಾ 30 ಸಾವಿರ ರೂಪಾಯಿಗಳಿಗೆ ಹೆಚ್ಚಿಸುವಂತಹ ವಿಚಾರವನ್ನು ಸರ್ಕಾರ ಗಂಭೀರವಾಗಿ ಆಲೋಚನೆ ಮಾಡುತ್ತದೆಯೇ ಎಂಬ ಪ್ರಶ್ನೆಯನ್ನು ನಾನು ಸನ್ಮಾನ್ಯ ಸಚಿವರಲ್ಲಿ ಕೇಳಿತ್ತಿದ್ದೇನೆ.

ಶ್ರೀ ಖಮರುಲ್ ಇಸ್ಲಾಂ : ಮಾನ್ಯ ಅಧ್ಯಕ್ಷರೇ, ಆಶ್ರಯ ಮನೆಗಳಿಗೆ ಸಂಬಂಧಿಸಿದಂತೆ ಸರ್ಕಾರ ಹತ್ತು ಸಾವಿರ ರೂಪಾಯಿಗಳಷ್ಟು ಹಣವನ್ನು ಸಬ್ಸಿಡಿಯಾಗಿ ನೀಡುತ್ತಿದ್ದು, ಮತ್ತು ಲೋನ್ ಕಾಂಪೊನೆಂಟ್ ಆಗಿರುವ ಹತ್ತು ಸಾವಿರ ರೂಪಾಯಿಗಳನ್ನು ಸಾಲವಾಗಿ ನಾವು ಹುಡ್ಕೋದಿಂದ ತೆಗೆದುಕೊಳ್ಳುತ್ತಿದ್ದೇವೆ, ಇದು ವಸ್ತುಸ್ಥಿತಿ. ಕನ್‌ಸ್ಟ್ರಕ್ಷನ್ ಮೆಟೀರಿಯಲ್ ಎಸ್ಕಲೇಶನ್

ಆಗಿದೆಯೆಂದು ತಾವು ಏನು ಹೇಳಿತ್ತಿದ್ದೀರಿ, ಒಟ್ಟು ಯೋಜನಾ ಬಾಬ್ತಿನಿಂದ ಬರುತ್ತಿರುವ ಸಾಲದ ವಸೂಲಾತಿ ಬಹಳ ಕಡಿಮೆಯಿರುವುದಲ್ಲದೆ, ಹುಡ್ಕೋದಿಂದ ತೆಗೆದುಕೊಂಡಿರುವ ಸಾಲವನ್ನು ಸರ್ಕಾರ ಮರುಪಾವತಿ ಮಾಡುತ್ತಿದೆ. ಮತ್ತು ಯಾವ ಹಣವನ್ನು ನಾವು ತೆಗೆದು ಕೊಳ್ಳುತ್ತಿದ್ದೇವೋ ಅದನ್ನು ಮಾರುಪಾವತಿಸಬೇಕಾಗಿರುತ್ತದೆ. ಆದುದರಿಂದ, ಸಬ್ಸಿಡಿ ಹಣವನ್ನು ಜಾಸ್ತಿ ಮಾಡುವುದು ಬಹಳ ಕಷ್ಟವಾಗಿದೆ.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುವಂಥಾದ್ದು ಏನೆಂದರೆ, ಅವರು ಮಾತನಾಡುತ್ತಾ ಸಾಲ ವಸೂಲಾತಿಯಲ್ಲಿ ಬಹಳ ಹಿಂದೆ ಇದ್ದೇವೆ ಎನ್ನುವಂಥ ವಿಚಾರ ಹೇಳಿದರು. ಸಾಲ ಕೊಟ್ಟಿದ್ದೇವೆಂದು ಅವರ ಗಮನಕ್ಕೆ ತಂದು ಸಾಲ ಕೇಳದೆ ಹೋದರೆ ಅವರು ಕೊಡುವುದಿಲ್ಲ, ಅದು ಬೇರೆ ವಿಚಾರ. ಸಾಲ ಎಷ್ಟು ಮತ್ತು ಸಬ್ಸಿಡಿ ಹಣ ಎಷ್ಟೆಂದು ನಾನು ಕೇಳುವುದಿಲ್ಲ. ಸಬ್ಸಿಡಿ ಹತ್ತು ಸಾವಿರ ಮತ್ತು ಸಾಲ ಇಪ್ಪತ್ತು ಸಾವಿರ ರೂಪಾಯಿಗಳೆಂದು ಬೇಕಾದರೂ ನೀವು ಕರೆಯಿರಿ, ನನ್ನ ಆಭ್ಯಂತರವಿಲ್ಲ. ಆದರೆ, ಮನೆ ನಿರ್ಮಾಣಕ್ಕೆ ಆಗಬೇಕಾದ ಪೂರ್ಣ ವೆಚ್ಚ, ಇವೊತ್ತು ಸರ್ಕಾರ ಕೊಡುವ ಇಪ್ಪತ್ತು ಸಾವಿರ ರೂಪಾಯಿಗಳ ಜೊತೆಗೆ ಫಲಾನುಭವಿಗಳು ತಮ್ಮಿಂದ ಭರಿಸಬೇಕಿರುವ ಪಾಲಿನ ಮೊತ್ತವನ್ನು ಹಾಕುವುದು ಕಷ್ಟಸಾಧ್ಯವಾಗಿರುವುದರಿಂದ ಮನೆಗಳು ಪೂರ್ಣಗೊಳ್ಳದೇ ಹಾಗೇ ಉಳಿದಿವೆ. ಏಕೆಂದರೆ, ಸರ್ಕಾರ ಒಂದು ಯೋಜನೆ ಹಮ್ಮಿಕೊಂಡ ನಂತರ ಅದು ಸಂಪೂರ್ಣವಾಗಿ ಯಶಸ್ವಿಯಾಗಬೇಕು. ಅಂದರೆ, ಮನೆಗಳ ನಿರ್ಮಾಣ ಕಾರ್ಯ ಪೂರ್ಣವಾದಾಗಲೇ ಆಶ್ರಯ ಯೋಜನೆ ಯಶಸ್ವಿಯಾಗುತ್ತದೆ. ಆದುದರಿಂದ, ಇದನ್ನು ತಾವು ದೃಷ್ಟಿಯಲ್ಲಿ ಇಟ್ಟುಕೊಂಡು ಸಬ್ಸಿಡಿ ಹಣವನ್ನು ಹತ್ತು ಸಾವಿರ ರೂಪಾಯಿಗಳೆಂದು, ಸಾಲವನ್ನು ಇಪತ್ತು ಸಾವಿರ ರೂಪಾಯಿಗಳೆಂದು ಕರೆದು ಒಟ್ಟು ಮೊತ್ತವನ್ನು ಮೂವತ್ತು ಸಾವಿರ ರೂಪಾಯಿಗಳಿಗೆ ಹೆಚ್ಚಿಸಿದಾಗ ಮನೆಗಳು ಆದಷ್ಟು ಬೇಗ ಪೂರ್ಣಗೊಳ್ಳುತ್ತವೆಂಬ ಕಳಕಳಿಯಿಂದ ನಾನು ಇವೊತ್ತು ಈ ಸದನದ ಮೂಲಕ, ಅಧ್ಯಕ್ಷರ ಮೂಲಕ ಮಾನ್ಯ ಸಚಿವರಿಗೆ ಹೇಳುತ್ತಿದ್ದೇನೆ. ಇದನ್ನು ತಾವು ತೀವ್ರವಾಗಿ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಖಮರುಲ್ ಇಸ್ಲಾಂ : ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಯನ್ನು ನಾನು ಪರಿಶೀಲಿಸುತ್ತೇನೆ.

ರಾಜ್ಯದಲ್ಲಿರುವ ವಸತಿ ಹೀನರು

75 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ, ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಸರ್ಕಾರದ ಅವಧಿಯಲ್ಲಿ (ಡಿಸೆಂಬರ್ 96 ರಿಂದ ಸೆಪ್ಟೆಂಬರ್ 1999 ರವರೆಗೆ) ವಸತಿಹೀನರಿಗೆ ವಸತಿ ಸೌಲಭ್ಯ ಕಲ್ಪಿಸಿಕೊಡಲು ಪ್ರಾರಂಭಿಸಿದ ಮನೆಗಳ ಸಂಖ್ಯೆ ಎಷ್ಟು? ಅವುಗಳು ಈಗ ಯಾವ ಯಾವ ಹಂತದಲ್ಲಿದೆ (ವರ್ಷವಾರು ವಿವರ ನೀಡುವುದು)?